

# ಇತಿಹಾಸದ ಪಿಸುಮಾತುಗಳ ಹುತ್ರಿದುರ್ಗದಲ್ಲೊಂದು ಅಲೆದಾಟ

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಇತಿಹಾಸ ಪ್ರಸಿದ್ಧ ಸ್ಥಳ. ಟಿಪ್ಪೂ ಸುಲ್ತಾನನ ನೆನಪುಗಳನ್ನುಳ್ಳ ಈ ದುರ್ಗ, ಇತಿಹಾಸಪ್ರಿಯರಿಗೆ, ಚಾರಣ ಸಾಹಸಿಗರಿಗೆ ಬಹು ಇಷ್ಟದ ಸ್ಥಳ.

■ ಡಾ. ಕೀರ್ತಿ ಮಲ್ಹೋತ್ರ

‘ಒಂದು ಕ್ಷಣಕ್ಕೂ ನಾನು ಶರಣಾಗುವ ಬಗ್ಗೆ ಯೋಚಿಸಲಾರೆ. ಇಪ್ಪತ್ತು ವರ್ಷಗಳಿಗೂ ಮೀರಿ ಟಿಪ್ಪೂವಿನ ಉಪ್ಪು ತಿಂದ ಈ ಅಂತರಂಗದ ಸೇವಕನಿಗೆ ಈ ಕೋಟೆಯ ರಕ್ಷಣೆಯನ್ನು ನಂಬಿ ವಹಿಸಲಾಗಿದೆ. ಉದಾರ ತಂದೆಯ ಪ್ರೀತಿಯ ಮಕ್ಕಳಂತೆ, ಆತನ ಬೆಂಬಲಕ್ಕೆ ನಮ್ಮದೆಲ್ಲವನ್ನೂ, ನಮ್ಮ ಪ್ರಾಣವನ್ನೂ, ಪ್ರಾಣಕ್ಕೆ ಮಿಗಿಲಾದುದನ್ನೂ ನಾವು ಅಪಾಯಕ್ಕೊಡ್ಡಲು ದೃಢವಾಗಿ ನಿಶ್ಚಯಿಸಿದ್ದೇವೆ’.

ಇದು ದಿನಾಂಕ 26 ಜೂನ್ 1791ರಂದು, ಹುತ್ರಿದುರ್ಗದ ಕಿಲೇದಾರ, ಬ್ರಿಟಿಷ್ ಭೂಸೇನೆಯ ಲೆಫ್ಟಿನೆಂಟ್ ಮೆಕ್ಲೆಂಡ್‌ಗೆ ನೀಡಿದ ದಿಟ್ಟ ಉತ್ತರ. ಲೆಫ್ಟಿನೆಂಟ್ ಕರ್ನಲ್ ಸ್ಟೂವರ್ಟ್ ಮುಂದಾಳತ್ವದ ಸೇನೆ ಹುತ್ರಿದುರ್ಗದ ಕೋಟೆಯ ಬಳಿಗೆ ಸಾರಿತ್ತು. ಕೋಟೆಯಿಂದ ಗುಂಡಿನ ಸುರಿಮಳೆ ಆಗುತ್ತಿದ್ದಂತೆ, ಸೇನೆಯ ಗುಪ್ತಚರ ಲೆಫ್ಟಿನೆಂಟ್ ಮೆಕ್ಲೆಂಡ್ ಕದನ ವಿರಾಮದ ಬಿಳಿಯ ಬಾವುಟವನ್ನು ಹಿಡಿದು, ಶರಣಾಗುವಂತೆ ಹೇಳಿದ್ದ. ಕಿಲೇದಾರನ ಉತ್ತರ, ‘ದುರ್ಗದ ಸೇನೆ ಶರಣಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿತ್ತು. ಆ ನೇರ ಉತ್ತರ, ಹುತ್ರಿದುರ್ಗವನ್ನು ಕೆಲಕಾಲವಾದರೂ ಬ್ರಿಟಿಷ್ ಸೇನೆ ತೊಂದರೆ ಕೊಡದೆ, ಬಿಟ್ಟುಬಿಡುವಂತೆ ಮಾಡಿತ್ತು. ಈ ವಿವರಗಳು ಶ್ರೀರಂಗಪಟ್ಟಣದ ಸೇನೆಯ ಕ್ಯಾಂಪ್‌ನಿಂದ ಲೆಫ್ಟಿನೆಂಟ್ ರಾಡ್ರಿಕ್